1.ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಎಂ.ಪಿ. ಪ್ರಕಾಶ್(ಗೃಹ, ಕಾನೂನು,ನ್ಯಾಯ ಮತ್ತು ಮಾನವ ಹಕ್ಕುಗಳು. ಸಂಸದೀಯ ವ್ಯವಹಾರಗಳ ಸಚಿವರು)(ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಡಿನೇಚರ್ಡ್ ಅನ್ಹೈಡ್ರಸ್ ಅಲ್ಕೊಹಾಲ್ (Denatured anhydrous alcohol)ನ ಮಾರಾಟದ ಮೇಲಿನ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶೇ.4 ರಷ್ಟು ಕಡಿತಗೊಳಿಸಿ ದಿನಾಂಕ 23.06.2007ರಂದು ಹೊರಡಿಸಲಾದ ಎಫ್‌ಡಿ 192 ಸಿಎಸ್‌ಎಲ್ 2007ನೇ ಸಂಖ್ಯೆ ಅಧಿಸೂಚನೆ.

2. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅ.ಸಂ. ಎಫ್‌ಡಿ 116 ಸಿಎಸ್‌ಎಲ್ 2006(9) ದಿನಾಂಕ 31.03.2006ಕ್ಕೆ ತಿದ್ದುಪಡಿ ಮಾಡಿ ದಿನಾಂಕ 07.07.2007ರಂದು ಹೊರಡಿಸಲಾದ ಎಫ್‌ಡಿ 238 ಸಿಎಸ್‌ಎಲ್ 2007ನೇ ಸಂಖ್ಯೆಯ ಅಧಿಸೂಚನೆ.

3. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅ.ಸಂ. ಎಫ್‌ಡಿ 116 ಸಿಎಸ್‌ಎಲ್ 2006(9) ದಿನಾಂಕ 31.03.2006ಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 23.03.2007ರಂದು ಹೊರಡಿಸಲಾದ ಎಫ್‌ಡಿ 43 ಸಿಎಸ್‌ಎಲ್ 2007(1)ನೇ ಸಂಖ್ಯೆಯ ಅಧಿಸೂಚನೆ.

4. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅ.ಸಂ. ಎಫ್‌ಡಿ 116 ಸಿಎಸ್‌ಎಲ್ 2006(16) ದಿನಾಂಕ 16.04.2006ಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 23.03.2007ರಂದು ಹೊರಡಿಸಲಾದ ಎಫ್‌ಡಿ 43 ಸಿಎಸ್‌ಎಲ್ 2007(2)ನೇ ಸಂಖ್ಯೆಯ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಕೆಲವು ಸರಕುಗಳನ್ನು ಕೈಗಾರಿಕಾ ಹೂಡುವಳಿ ಸರಕುಗಳು ಮತ್ತು ಪ್ಯಾಕೇಜ್

ಸಾಮಗ್ರಿಗಳಾಗಿ ನಗದಿಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 07.07.2007ರಂದು ಹೊರಡಿಸಲಾದ ಎಫ್‌ಡಿ 457 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸುತ್ತೇನೆ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ: ಭ್ರೂಣ ಹತ್ಯೆ ಬಗ್ಗೆ ಇವತ್ತು ಸದನ ಪ್ರಾರಂಭವಾದ ತಕ್ಷಣ ಸರ್ಕಾರ statement ಕೊಡುತ್ತೆವೆಂದು ಮಾನ್ಯ ಹೊರಟ್ಟಿಯವರು ಅಶ್ವಾಸನೆ ಕೊಟ್ಟು ಹೋಗಿದ್ದರು.

ಅಧ್ಯಕ್ಷರು: ಹೌದು ಕೊಡಿಸುತ್ತೇನೆಂದು ಹೇಳಿದ್ದರು.

ಶ್ರೀ ಜಿ.ವಿ ಶ್ರೀರಾಮರೆಡ್ಡಿ: ಈಗ ಸದನದಲ್ಲಿ ಮಾನ್ಯ ಗೃಹ ಮತ್ತು ಕಾನೂನು ಮಂತ್ರಿಗಳು ಇದ್ದಾರೆ. ಅದಕ್ಕೆ ಅವರು ಉತ್ತರ ಹೇಳಬೇಕಾಗಿದೆ. ಸದನ ಪ್ರಾರಂಭವಾದ ತಕ್ಷಣ ಉತ್ತರ ಕೊಡಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಶ್ರೀರಾಮರೆಡ್ಡಿಯವರು ಕೇಳುತ್ತಿದ್ದಾರೆ. ಭ್ರೂಣ ಹತ್ಯೆಗಳ ಬಗ್ಗೆ ಆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಸಾರ್ವಜನಿಕರ ಮನಸ್ಸಿನಲ್ಲಿ ಕೂಡ ಸರ್ಕಾರದ ಬಗ್ಗೆ, ಅದರ ಕಾರ್ಯವೈಖರಿ ಬಗ್ಗೆ, ಪೋಲಿಸ್ ಇಲಾಖೆಯ ಬಗ್ಗೆ ಒಂದು ತರಹದ ಭಾವನೆ ಇದೆ. ಅದರ ಬಗ್ಗೆ ಚರ್ಚೆಯಾಗಿದೆ. ನನ್ನೆ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಚರ್ಚೆಗೆ ಬರಲಿಲ್ಲ. ತಾವು ಸದನದಲ್ಲಿ ಇರಲಿಲ್ಲ. ಹೊರಟ್ಟಿಯವರು ಉತ್ತರ ಕೊಡಿಸುತ್ತೇನೆಂದು ಹೇಳಿದ್ದಾರೆ. ಈಗ ಶ್ರೀರಾಮರೆಡ್ಡಿಯವರು ಕೇಳುತ್ತಿದ್ದಾರೆ. ಈಗ ಇದನ್ನು ಪ್ರಾರಂಭ ಮಾಡಿ. ಮಧ್ಯದಲ್ಲಿ ಅದಕ್ಕೆ ಉತ್ತರ ಕೊಡಿಸುವ ವ್ಯವಸ್ಥೆ ಆಗಲಿ. ಅದಕ್ಕೆ ಉತ್ತರ ಹೇಳಲು ಅವರೇ ಬರಬೇಕು. ಕುಮಾರಸ್ವಾಮಿಯವರು ಬಂದಿದ್ದಾರೋ, ಇಲ್ಲವೋ? ಗೊತ್ತಿಲ್ಲ. ಕುಮಾರಸ್ವಾಮಿಯವರು, ಅಶೋಕ್‌ರವರು ಸದನದಲ್ಲಿರಬೇಕು, ಇವತ್ತು ಉತ್ತರ ಕೊಡಬೇಕು. ಆಗ ಸರಿಯಾದ ರೀತಿಯಲ್ಲಿ ಆಗುತ್ತದೆ. ಇವತ್ತು ಅಧಿವೇಶನದ ಕೊನೆಯ ದಿವಸವಾಗಿದೆ.

ಅಧ್ಯಕ್ಷರು: ಆಯಿತು, ಆಮೇಲೆ ಅವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ: ಮಾನ್ಯ ಗೃಹ ಮಂತ್ರಿಗಳಿದ್ದಾರೆ. ಅವರು ಹೇಳಿಕೆ ಕೊಡಲಿ.